## ಸೂಕ್ತಿಪ್ರಭ

ಸುಖವೆಂಬ ಸುಗಂಧವನ್ನು ಇತರರ ಮೇಲೆ ಎರಚುವಾಗ ಸ್ವತಃ ನಮ್ಮ ಮೇಲೆ ಕೆಲ ಬಿಂದುಗಳಾದರೂ ಬಿದ್ದೇ ಬೀಳುವುವು. —ಎಮರ್ಸನ್

* *

ಕಷ್ಟ ಬಂದರೆ ಬರಲಿ. ಅದು ಕುದುರೆಗೆ ಚುಚ್ಚು ಮುಳ್ಳಿದ್ದಂತೆ ನಮ್ಮ ಪ್ರಗತಿಗೆ ಪೇರಕವಾಗುತ್ತದೆ. ನಮ್ಮನ್ನು ಸುಮ್ಮನಿರಗೊಡದೆ ಮುಂದಕ್ಕೆ ಓಡಿಸುತ್ತಿರುವುದೇ ಕಷ್ಟದಿಂದಾಗುವ ಪ್ರಯೋಜನ.

—ಉಮರ್ ಖಯ್ಯಾಂ

* *

ಅತ್ಯಾಸೆ ಇದ್ದಮೇಲೆ ಬೇರೆ ದುರ್ಗುಣಗಳೇಕೆ ?

—ಭರ್ತೃಹರಿ

* *

ಅದೃಷ್ಟವಂತ ವ್ಯಕ್ತಿಯನ್ನು ನೀರಿಗೆ ಎಸೆದರೆ, ಅವನು ಬಾಯಿಯಲ್ಲಿ ಮೀನನ್ನು ಕಚ್ಚಿಕೊಂಡು ಹಿಂದಿರುಗುತ್ತಾನೆ. —ಅರೇಬಿಯನ್ ಗಾದೆ

* *

ನಿಮ್ಮ ಗೌರವ ಬೇರೆಲ್ಲೂ ಇಲ್ಲ, ನಿಮ್ಮ ನಾಲಗೆ ತುದಿಯಲ್ಲಿದೆ. —ಬಿಪರ್ಸ್

* *

ಏನಾದರೂ ಮಾಡಬೇಕೆಂದು ಬಯಸುವವನಿಗೆ ದಾರಿ ಸಿಗುತ್ತದೆ, ಬಯಸದವನಿಗೆ ನೆವ ಸಿಗುತ್ತದೆ.

—ಸ್ಟೀಫನ್ ಡಾಲಿ

* *

ಸಕ್ಕರೆಯ ಸಿಹಿ ಬಹಳ ಕಾಲ ನಾಲಗೆಯ ಮೇಲೆ ಉಳಿಯುವುದಿಲ್ಲ. ಆದರೆ ಹಿತನುಡಿಯ ಸಿಹಿ ಹೃದಯದಲ್ಲಿ ಬಹಳ ಕಾಲ ಉಳಿಯುತ್ತದೆ.

—ಥಾಯ್‌ಲ್ಯಾಂಡ್ ಗಾದೆ

* *

ಸಾವು ವ್ಯಕ್ತಿಯೊಡನೆ ಪಯಣಿಸುತ್ತದೆ, ವ್ಯಕ್ತಿಯೊಡನೆ ವಿಶ್ರಮಿಸುತ್ತದೆ. ಎಲ್ಲಿ ಹೋದರೂ ಅದು ಅವನನ್ನು ಬಿಡದು. —ಶ್ರೀರಾಮ

* *

ನೀವು ಪ್ರಗತಿ ಸಾಧಿಸಬೇಕಾದರೆ, ಇತಿಹಾಸವನ್ನು ಅನುಕರಿಸುವುದಲ್ಲ, ನೀವೇ ಹೊಸ ಇತಿಹಾಸವನ್ನು ನಿರ್ಮಿಸಬೇಕು. —ಮಹಾತ್ಮಾ ಗಾಂಧಿ

## ಪ್ರಾರ್ಥನೆ

### ಬ್ರಹ್ಮಸ್ತೋತ್ರಮ್

ಓಂ ನಮಸ್ತೇ ಸತೇ ಸರ್ವಲೋಕಾಶ್ರಯಾಯ
ನಮಸ್ತೇ ಚಿತೇ ವಿಶ್ವರೂಪಾತ್ಮಕಾಯ ।
ನಮೋಽದ್ವೈತತತ್ತ್ವಾಯ ಮುಕ್ತಿಪ್ರದಾಯ
ನಮೋ ಬ್ರಹ್ಮಣೇ ವ್ಯಾಪಿನೇ ನಿರ್ಗುಣಾಯ ॥

ಓಂ, ಸರ್ವಲೋಕಗಳಿಗೆ ಆಶ್ರಯವಾದ ಸದ್ವಸ್ತುವಿಗೆ ನಮಸ್ಕಾರ. ವಿಶ್ವರೂಪಾತ್ಮಕವಾದ ಚಿದ್ವಸ್ತುವಿಗೆ ನಮಸ್ಕಾರ. ಮುಕ್ತಿಪ್ರದವಾದ ಅದ್ವೈತ ತತ್ತ್ವಕ್ಕೆ ನಮಸ್ಕಾರ. ಸರ್ವವ್ಯಾಪಿಯಾದ ನಿರ್ಗುಣ ಬ್ರಹ್ಮಕ್ಕೆ ನಮಸ್ಕಾರ.

ತ್ವಮೇಕಂ ಶರಣ್ಯಂ ತ್ವಮೇಕಂ ವರೇಣ್ಯಂ
ತ್ವಮೇಕಂ ಜಗತ್ಕಾರಣಂ ವಿಶ್ವರೂಪಮ್ ।
ತ್ವಮೇಕಂ ಜಗತ್ಕರ್ತೃಪಾತೃಪ್ರಹರ್ತೃ
ತ್ವಮೇಕಂ ಪರಂ ನಿಶ್ಚಲಂ ನಿರ್ವಿಕಲ್ಪಮ್ ॥

ನೀನೊಬ್ಬನೇ ಭಕ್ತರಿಗೆ ಆಶ್ರಯಸ್ಥಾನ, ನೀನೇ ಅಪೇಕ್ಷಣೀಯವಾದ ವಸ್ತು. ನೀನೇ ಜಗತ್ತಿನ ಕಾರಣ ಮತ್ತು ವಿಶ್ವರೂಪವು. ನೀನೇ ಜಗತ್ತಿನ ಕರ್ತೃವೂ ಪಾಲಕನೂ ನಾಶಕನೂ ಆಗಿದ್ದೀಯೆ. ನೀನು ಏಕನೂ ಶ್ರೇಷ್ಠನೂ ನಿರ್ವಿಕಲ್ಪನೂ ಆಗಿದ್ದೀಯೆ.

ಮಹೋಚ್ಚೈಃ ಪದಾನಾಂ ನಿಯಂತೃ ತ್ವಮೇಕಂ
ಪರೇಷಾಂ ಪರಂ ರಕ್ಷಕಂ ರಕ್ಷಕಾಣಾಮ್ ।

ಉಚ್ಚಸ್ಥಾನದಲ್ಲಿರುವವರನ್ನು ಆಳುವವನೂ ನೀನೇ. ಉತ್ತಮೋತ್ತಮನು ನೀನೇ. ರಕ್ಷಕರನ್ನು ರಕ್ಷಿಸುವವನೂ ನೀನೇ.

ತದೇಕಂ ಸ್ಮರಾಮಃ ತದೇಕಂ ಭಜಾಮಃ
ತದೇಕಂ ಜಗತ್ಸಾಕ್ಷಿರೂಪಂ ನಮಾಮಃ ।
ಸದೇಕಂ ನಿಧಾನಂ ನಿರಾಲಂಬಮೀಶಂ
ಭವಾಂಭೋಧಿಪೋತಂ ಶರಣ್ಯಂ ವ್ರಜಾಮಃ ॥

ಆ ಅದ್ವಿತೀಯವನ್ನೇ ಸ್ಮರಿಸುತ್ತೇವೆ, ಅದನ್ನೇ ಭಜಿಸುತ್ತೇವೆ. ಆ ಅದ್ವಿತೀಯವಾದ ಜಗತ್ಸಾಕ್ಷಿರೂಪವನ್ನೇ ನಮಿಸುತ್ತೇವೆ. ಸತ್ಸ್ವರೂಪವೂ, ಅದ್ವಿತೀಯವೂ, ನಿಧಾನವೂ, ನಿರಾಲಂಬವೂ, ಸಂಸಾರಸಾಗರವನ್ನು ದಾಟಲು ನಾವೆಯಂತಿರುವುದೂ ಶರಣ್ಯವೂ ಆದ ಬ್ರಹ್ಮವಸ್ತುವಿನಲ್ಲಿ ಶರಣಾಗತರಾಗುತ್ತೇವೆ.